ದಿನಾಂಕ: 29.08.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಡಿ ಜಿ ಜಿ ವಕೀಲರಿಂದಃ**

ನಾನು ಎಂ ಬಿ ಬಿ ಎಸ್ 2 ವರ್ಷಗಳ ವರೆಗೆ ಓದಿದ್ದು ನನ್ನ ತಾಯಿಗೆ ಕ್ಯಾನ್ಸರ್ ಮತ್ತು ಲಿವರ್ ಸಿಯೋಸಿಸ್ ಆಗಿದ್ದರಿಂದ ಅವರನ್ನು ನೋಡಿಕೊಳ್ಳುವ ಸಲುವಾಗಿ ನಾನು ವಿದ್ಯಾಭ್ಯಾಸವನ್ನು ಬಿಟ್ಟಿರುತ್ತೇನೆ. ದಾವಾಸ್ತಿ ನನ್ನ ಅಜ್ಜಿಯಿಂದ ನನ್ನ ತಾಯಿಗೆ ನನ್ನ ತಾಯಿಯಿಂದ ನನಗೆ ಬಂದಿರುತ್ತದೆ. ನನ್ನ ಗಂಡ ನನ್ನ ಜೊತೆಯಲ್ಲಿ ಇದ್ದಾರೆ ಅವರು ಕೆಲಸದ ನಿಮಿತ್ತ ಚನ್ನೈನಲ್ಲಿ ವಾಸವಾಗಿದ್ದಾರೆ. ನಮ್ಮ ಮನೆಯ ನಿರ್ವಹಣೆಯನ್ನು ನಾವಿಬ್ಬರು ನೋಡಿಕೊಳ್ಳುತ್ತೇವೆ. ದಾವಾಸ್ತಿ ನನ್ನ ತಾಯಿಕಡೆಯಿಂದ ಬಂದಿರುವುದರಿಂದ ಈಗ ದಾವಾಸ್ತಿಯಲ್ಲಿ ನನ್ನ ಗಂಡನಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ದಾವಾಸ್ತಿಗೆ ನಿಮ್ಮನ್ನು ಬಿಟ್ಟು ಬೇರೆ ಹಕ್ಕುದಾರರು ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ನಂತರ ನನ್ನ ಮಗಳು ಸಹ ಇದ್ದಾರೆ ಎಂದು ನುಡಿಯುತ್ತಾರೆ.

ನಾನು ಮತ್ತು ನನ್ನ ಮಗಳು ಮುಂದೆ ಯಾವುದೇ ಕಾನಾನು ತೊಡಕು ಬರಬಾರದು ಎಂದು ಕರಾರು ಪತ್ರ ಬೆರದುಕೊಟ್ಟಿದ್ದೇವೆ ಎಂದರೆ ನಿಜ 2014 ರಲ್ಲಿ ನಾವು ಆಸ್ತಿಯನ್ನು ಮಾರಾಟ ಮಾಡಲು ಇಟ್ಟಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಯಾವತ್ತೂ ಮಾರಾಟ ಮಾಡುವ ಉದ್ದೇಶ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾಸ್ತಿಯನ್ನು ಮಾರಾಟ ಮಾಡುತ್ತೇವೆ ಎಂದು ಹೇಳಿದಾಗ ನಾನೇ ವಾದಿಯರನ್ನು ಮನೆಗೆ ಕರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಆಸ್ತಿಯನ್ನುಮಾರಾಟ ಮಾಡುವ ಉದ್ದೇಶ ಯಾವತ್ತೂ ಇರಲಿಲ್ಲ ಮುಂದೆ ಸಹ ಮಾರಾಟ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ನಾನು ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡಲು ಇಷ್ಟ ಇರುವುದಿಲ್ಲ ಆದ್ದರಿಂದ ನೀವೆ ತೆಗೆದುಕೊಳ್ಳಿ ಎಂದು ನಾನು ವಾದಿಯರಿಗೆ ತಿಳಿಸಿದ್ದೆ ಎಂದರೆ ಸರಿಯಲ್ಲ. ನಾನು ಒತ್ತಡ ಮಾಡಿದ್ದರಿಂದ ವಾದಿಯರು ಮಧ್ಯಸ್ತಿಕೆಗಾರರನ್ನು ಕರೆದುಕೊಂಡು ಬಂದರು ಎಂದರೆ ಸರಿಯಲ್ಲ.

ಸಾಕ್ಷಿ ಮುಂದುವರೆದು ದುಡ್ಡಿನ ವ್ಯವಹಾರಕ್ಕಾಗಿ ಬಂದಿದ್ದರು ಎಂದು ನುಡಿಯುತ್ತಾರೆ. ರೂ.5 ಲಕ್ಷ 10 ಸಾವಿರಗಳಿಗೆ ಆಸ್ತಿಯನ್ನು ಮಾರಾಟ ಮಾಡಲು ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಸ್ತಿ 60 ಲಕ್ಷ ಬೆಲೆಬಾಳುವ ಆಸ್ತಿಯಾಗಿದ್ದು ಮಾರಾಟ ಮಾಡುವ ಉದ್ದೇಶವಿಲ್ಲ ಎಂದು ನುಡಿಯುತ್ತಾರೆ. 2014 ರಲ್ಲಿ ರೂ. 5 ಲಕ್ಷ 10 ಸಾವಿರಗಳಿಗೆ ಮಾರಾಟ ಮಾಡಲು ನಾನು ಒಪ್ಪಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಕೂಡ ರೂ.5 ಲಕ್ಷ 10 ಸಾವಿರಗಳಿಗೆ ಖರೀದಿ ಮಾಡಲು ಒಪ್ಪಿಕೊಂಡರು ಎಂದರೆ ಸರಿಯಲ್ಲ.

ದಿಃ21.04.2014 ರಂದು ವಾದಿಯರನ್ನು ಕರೆಸಿ ರೂ.5 ಲಕ್ಷ ಹಣವನ್ನು ಮುಂಗಡವಾಗಿ ಪಡೆದು ಉಳಿದ ರೂ.10 ಸಾವಿರ ಹಣವನ್ನು ರಿಜಿಸ್ಟರ್ ಮಾಡುವಾಗ ಕೊಡಲು ಒಪ್ಪಿದ್ದೇನೆ ಎಂದರೆ ಸರಿಯಲ್ಲ. ದಿಃ21.04.2014 ರಂದು ನಾನು ರೂ.5 ಲಕ್ಷ ಹಣವನ್ನು ಅಡ್ವಾನ್ಸ್ ಪಡೆದುಕೊಂಡು ಅವತ್ತೆ ನಾನು ಕರಾರು ಪತ್ರ ಬರೆದುಕೊಟ್ಟು 11 ತಿಂಗಳ ಒಳಗೆ ಬಾಕಿ ಹಣವನ್ನು ಕೊಟ್ಟರೆ ನೊಂದಾವಣೆ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಕರಾರು ಪ್ರಕಾರ 11 ತಿಂಗಳ ಒಳಗೆ ನೊಂದಾವಣಿ ಮಾಡಿಕೊಟ್ಟ ನಂತರ ಸ್ವಾದೀನ ಬಿಟ್ಟುಕೊಡುತ್ತೇನೆ ಎಂದು ಹೇಳಿದ್ದೇನೆ ಎಂಬ ಪ್ರಶ್ನೆಗೆ ಸಾಕ್ಷಿ ಹಣ ಕೊಡದಿದ್ದಲ್ಲಿ ಮನೆಯನ್ನು ಬಿಟ್ಟು ಕೊಡುತ್ತೇನೆ ಎಂದು ಹೇಳಿದ್ದೇನೆ ಎಂದು ಹೇಳುತ್ತಾರೆ. ವಾದಿಯರು ಹಲವಾರು ಭಾರಿ ಬಂದು ಮನೆಯನ್ನು ನೊಂದಾವಣೆ ಮಾಡಿಕೊಡಿ ಎಂದು ಕೇಳಿದ್ದರು ಎಂದರೆ ಸರಿಯಲ್ಲ. 11 ತಿಂಗಳ ಕಾಲಾವಧಿ ಮುಗಿದ ನಂತರವೂ ಸಹ ಬಾಕಿ ರೂ.10 ಸಾವಿರ ಪಡೆದುಕೊಂಡು ಮನೆ ನೊಂದಾವಣೆ ಮಾಡಿಕೊಡಿ ಎಂದು ಕೇಳಿದ್ದರು ಎಂದರೆ ಸರಿಯಲ್ಲ. ಒಂದಲ್ಲ ಒಂದು ಕಾರಣ ಹೇಳುತ್ತಾ ನಾನು ನೊಂದಾವಣಿ ಮಾಡಿಕೊಡಲು ಮುಂದೆ ಬಂದಿಲ್ಲ ಎಂದರೆ ಸರಿಯಲ್ಲ. ಮನೆ ನೊಂದಾವಣೆ ಮಾಡಿಕೊಡಿ ಎಂದು ಕೇಳಿದಾಗ ನಾನು ತಿರಸ್ಕರಿಸಿದ್ದೇನೆ ಎಂದರೆ ಸರಿಯಲ್ಲ. ಅವರು ಹಣವನ್ನು

ಪಡೆದುಕೊಳ್ಳಲು ಬಂದಿದ್ದರು ಎಂದು ಹೇಳುತ್ತಾರೆ. ವಾದಿ ಮೌಖಿಕವಾಗಿ ಸಾಕಷ್ಟು ಸಾರಿ ನಿಮ್ಮ ಮನೆಗೆ ಬಂದು ನೊಂದಾವಣೆ ಮಾಡಿಕೊಡಿ ಎಂದು ಕೇಳಿದ್ದರೂ ಸಹ ನೀವು ಮಾಡಿಕೊಡದ ಕಾರಣ ವಾದಿ 19.04.2015 ರಂದು ನೋಟೀಸ್ ನೀಡಿ ನೊಂದಾವಣೆ ಮಾಡಿಕೊಡಲು ಕೋರಿದ್ದರು ಎಂದರೆ ಸಾಕ್ಷಿ ನೋಟೀಸ್ ನೀಡಿದ್ದು ಸರಿ ನಾನು ಹಣವನ್ನು ಹಿಂದೆ ಕೊಡುತ್ತೇನೆ ಎಂದು ಹೇಳುತ್ತಾರೆ.

ನೋಟೀಸ್ ನನಗೆ ಮತ್ತು ನನ್ನ ಮಗಳಿಗೆ ತಲುಪಿದೆ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ಮಗಳು ಭಾರತದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ನೋಟೀಸ್ ಪಡೆದು ನಾನು ವಾದಿಗೆ ಪ್ರತಿಉತ್ತರ ಕೊಟ್ಟಿದ್ದೇನೆ ಎಂದರೆ ನಿಜ. ನಾನು ಸಾಲದ ಭದ್ರತೆಗಾಗಿ ಕರಾರು ಪತ್ರ ಬರೆದುಕೊಟ್ಟಿದ್ದೇನೆ ಎಂದು ಸುಳ್ಳು ಉತ್ತರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ವಾದಿ ಬಾಕಿ ಇರುವ ರೂ.10 ಸಾವಿರ ನೀಡಿ ಕ್ರಯ ಪತ್ರ ಬರೆಸಿಕೊಳ್ಳಲು ತಯಾರಿದ್ದಾರೆ ಎಂದರೆ ಸಾಕ್ಷಿ ನಾನು ಕ್ರಯ ಪತ್ರ ಬರೆದುಕೊಡಲು ತಯಾರಿಲ್ಲ ಎಂದು ನುಡಿಯುತ್ತಾರೆ . ನಾನು ವಾದಿಗೆ ದಾವಾಸ್ತಿಯನ್ನು ಮಾರಾಟ ಮಾಡಲು ಒಪ್ಪಿ ರೂ.5 ಲಕ್ಷ ಮುಂಗಡ ಹಣ ಪಡೆದು ಈಗ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ವಾದಿಯ ಜೊತೆ 2014 ರಿಂದ ಹಣದ ವ್ಯವಹಾರ ಮಾಡುತ್ತಿದ್ದೇನೆ. ಅದಕ್ಕಿಂತ ಪೂರ್ವ ಯಾವುದೇ ಹಣದ ವ್ಯವಹಾರ ಮಾಡಿರುವುದಿಲ್ಲ. ಈ ವ್ಯವಹಾರವನ್ನೆ ನಾನು ವಾದಿಯಿಂದ ಮೊದಲಭಾರಿಗೆ ಮಾಡಿರುತ್ತೇನೆ. ಅದಕ್ಕಿಂತ ಮುಂಚೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ. ಸಾಲಕ್ಕಾಗಿ ನಾನು ರೂ. 5 ಲಕ್ಷ ಹಣವನ್ನು ಪಡೆದಿದ್ದೇನೆ ಎಂದು ಕರಾರು ಪತ್ರದಲ್ಲಿ ಬರೆಸಿರುತ್ತೇನೆ ನಾನು ವಾದಿಗೆ ಹಣ ಪಾವತಿಸಿದ ಬಾಬ್ತು ನನ್ನಲ್ಲಿ ದಾಖಲೆಗಳು ಇವೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ಈ ವಿಚಾರ ನಾನು ನಮ್ಮ ವಕೀಲರಿಗೆ ತಿಳಿಸಿದ್ದೇನೆ. ಬಡ್ಡಿಯನ್ನು ಕೊಡುವ ಸಮಯದಲ್ಲಿ ನಮ್ಮ ಮನೆಯಲ್ಲಿ ಲೀಸ್ ಗೆ

ಇರುವ ಸುನಿತಾ ಅಲಿಯಾಸ್ ಲಕ್ಷ್ಮಿ ಇದ್ದಾರೆ. ಅವರನ್ನು ಕರೆಸಿ ಸಾಕ್ಷಿ ನುಡಿಸಲು ತೊಂದರೆ ಇಲ್ಲ. ಸಾಲ ಪಡೆದುಕೊಂಡಿದ್ದಲ್ಲಿ ಆ ಸಮಯದಲ್ಲಿ ಪ್ರಾಮಿಸರಿ ನೋಟ್ ಅಥವಾ ಅಡಮಾನ ಪತ್ರ ಬರೆದುಕೊಡಬೇಕಿತ್ತಲ್ಲವಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಕರಾರು ಪತ್ರ ಬರೆದು ನೊಂದಾವಣಿ ಮಾಡಿಕೊಡಬೇಕು ಇಲ್ಲದಿದ್ದಲ್ಲಿ ಸಾಲ ಕೊಡುವುದಿಲ್ಲ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ನಿಪಿ-1 ನ್ನು ಬರೆದುಕೊಡುವ ಸಮಯದಲ್ಲಿ ನನಗೆ ವಾದಿ ಯಾವುದೇ ಭಯ, ಒತ್ತಾಯ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಅವಶ್ಯಕತೆ ಇತ್ತು ಎಂದು ನುಡಿಯುತ್ತಾರೆ. ಕರಾರು ಪತ್ರದಲ್ಲಿ ಯಾವುದೇ ಬಡ್ಡಿ ವಿಚಾರ ಬರೆದಿರಲಿಲ್ಲ

**(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು